# ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿ
**ಮಲ್ಲೇಶ್ವರಂ, ಬೆಂಗಳೂರು – 560 003**

**KARNATAKA SCHOOL EXAMINATION AND ASSESSMENT BOARD**
**Malleshwaram, Bengaluru – 560 003**

## 2024-25ರ ಎಸ್.ಎಸ್.ಎಲ್.ಸಿ. ಮಾದರಿ ಪ್ರಶ್ನೆಪತ್ರಿಕೆ -2
## S.S.L.C. MODEL QUESTION PAPER-2 : 2024-25

## ವಿಷಯ : ದ್ವಿತೀಯ ಭಾಷೆ — ಕನ್ನಡ
## Subject : Second Language — KANNADA

**ವಿಷಯ ಸಂಕೇತ : 33-K** **Subject Code : 33-K**

ಸಮಯ : 3 ಗಂಟೆ ] [ Time : 3 Hours

ಗರಿಷ್ಠ ಅಂಕಗಳು : 80 ] [ Max. Marks : 80

---

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ಒಟ್ಟು 38 ಪ್ರಶ್ನೆಗಳನ್ನು ಹೊಂದಿದೆ.
2. ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
3. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ಸೂಚಿಸುತ್ತವೆ.
4. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

[ Turn over

CAREERINDIA



**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ : 4 × 1 = 4**

1. ಹ್ರಸ್ವಸ್ವರಗಳಿಗೆ ಉದಾಹರಣೆಗಳಾಗಿರುವ ಅಕ್ಷರಗಳಿವು

(ಎ) ಏ, ಐ, ಓ, ಔ (ಬಿ) ಅ, ಇ, ಎ, ಒ

(ಸಿ) ಕ, ಚ, ಟ, ಪ (ಡಿ) ಙ, ಞ, ನ, ಮ

2. ಹೆಸರನ್ನು ಸೂಚಿಸುವ ವ್ಯಾಕರಣಾಂಶ ಇದಾಗಿದೆ

(ಎ) ಕ್ರಿಯಾಪದ (ಬಿ) ಸರ್ವನಾಮ

(ಸಿ) ನಾಮಪದ (ಡಿ) ವಿಶೇಷಣ

3. 'ಕೈಮುಟ್ಟಿ' ಪದವು ಈ ಸಮಾಸವಾಗಿದೆ

(ಎ) ತತ್ಪುರುಷ ಸಮಾಸ (ಬಿ) ಕರ್ಮಧಾರಯ ಸಮಾಸ

(ಸಿ) ಗಮಕ ಸಮಾಸ (ಡಿ) ಕ್ರಿಯಾಸಮಾಸ

4. ದ್ವಿರುಕ್ತಿಗೆ ಉದಾಹರಣೆ ಇದು

(ಎ) ತುತ್ತತುದಿ (ಬಿ) ಬೆನ್ನುತಟ್ಟು

(ಸಿ) ಕಸ–ಕಡ್ಡಿ (ಡಿ) ಸರಸರ

www.careerindia.com

CAREERINDIA



II. ಕೆಳಗಿನ ಪ್ರತಿಯೊಂದು ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 12 × 1 = 12

5. ಗಿಳಿಯ ಯಾವ ಗುಣವನ್ನು ಇಂದ್ರನು ಮೆಚ್ಚಿಕೊಂಡನು ?

6. ಅಸಿ–ಮಸಿ ಎಂದರೇನು ?

7. ಶ್ರೇಷ್ಠ ಗುರುವಿನಲ್ಲಿ ಎಂತಹ ಶಕ್ತಿ ಇರುತ್ತದೆ ?

8. ಅಮೆರಿಕಾದಲ್ಲಿ ಗ್ರ್ಯಾನೆಟ್ ಕಡಲಹಕ್ಕಿ ಗೂಡನ್ನು ಯಾವ ವಸ್ತುಗಳಿಂದ ಅಲಂಕರಿಸಿತ್ತು ?

9. ನೀಲಿ ಸಾಮ್ರಾಟ ಹಾಗೂ ಸಗ್ಗದಕ್ಕಿಗಳು ಗೂಡಿನ ಹೊರಮೈಯನ್ನು ಜೇಡರ ಮೊಟ್ಟೆಗಳ ಕೋಶದಿಂದ ಅಲಂಕರಿಸುವ ಉದ್ದೇಶವೇನು ?

10. ಗುರುಗಳು ಹೇಳಿದಂತೆ ಜೀವನದ ತೊಂದರೆಗಳಿಗೆ ನಿಜವಾದ ಕಾರಣವೇನು ?

11. ಹಾ.ಮಾ. ನಾಯಕರು ತಿಳಿಸುವಂತೆ ನಮ್ಮ ಹಿರಿಯರು ನಮಗೆ ಏನು ಕಾಣಿಸಿದ್ದಾರೆ ?

12. ಕಾಡನ್ನು ಅಲೆದ ಸಿದ್ಧಾರ್ಥನಿಗೆ ಹೊಳೆದುದ್ದೇನು ?

13. ಯುಗಾದಿಯ ಸಂದರ್ಭದಲ್ಲಿ ನೆಲದಮ್ಮ ಹೇಗೆ ಸಿಂಗಾರಗೊಳ್ಳುತ್ತಾಳೆ ?

14. ಕವಿ ಎಂ. ಗೋಪಾಲಕೃಷ್ಣ ಅಡಿಗರು ಎಂತಹ ಹೇಡಿತನ ಬೇಡ ಎಂದಿದ್ದಾರೆ ?

15. ಕುಣಿಗಲ್ ಕೆರೆ ಹೇಗೆ ಬಾಗಿದೆ ?

16. ವೇಷ ಮತ್ತು ಆಚರಣೆಗಳ ನಡುವಿನ ಸಂಬಂಧ ಹೇಗಿರಬೇಕೆಂದು ಸಿದ್ಧರಾಮ ಹೇಳುತ್ತಾರೆ ?

www.careerindia.com

CAREERINDIA



**III. ಕೆಳಗಿನ ಪ್ರಶ್ನೆಗಳಿಗೆ ಮೂರು ಅಥವಾ ನಾಲ್ಕು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 8 × 2 = 16**

17. ರೈತರು ಬೇಸಾಯವೇ ಬೇಡ ಎನ್ನುವ ಪರಿಸ್ಥಿತಿ ನಿರ್ಮಾಣವಾಗಲು ಕಾರಣವೇನು ?

18. ಭಗವಂತನು ಕೊಟ್ಟ ಈ ಬದುಕನ್ನು ಯಾವ ರೀತಿ ನಡೆಸಬೇಕೆಂದು ಗುರುಗಳು ಹೇಳಿದರು ?

19. ಸೌಜನ್ಯದ ವರ್ತನೆಯ ಗುರುತುಗಳಾವುವು ?

20. ಯುಗದ ಆದಿ ತಂದ ಸಂಭ್ರಮವೇನು ?

21. 'ಭಾವ ತಂದಾನೆ ಬಣ್ಣದ ಸೀರೆ.' – ಈ ಸಾಲಿನ ಅರ್ಥವೈಶಿಷ್ಟ್ಯವೇನು ?

22. ಒಡಲು ಒಡೆವಂತೆ ಅರ್ಜುನನು ಮನದಲ್ಲಿ ನಗಲು ಕಾರಣವೇನು ?

23. ವೈದ್ಯರು ಭೀಮನಾಯಕನ ಮಗುವಿನ ಪ್ರಾಣವನ್ನು ಹೇಗೆ ಉಳಿಸಿದರು ?

24. ಕವಿಯ ಅಭಿವ್ಯಕ್ತಿಯಲ್ಲಿ ಕನ್ನಡ ನಾಡಿನ ವಿಸ್ತಾರ ಮತ್ತು ವಿಶೇಷತೆಯನ್ನು ವಿವರಿಸಿ.

**IV. ಕೆಳಗಿನ ಕವಿ / ಸಾಹಿತಿಯ ಜನ್ಮಸ್ಥಳ, ಕಾಲ, ಕೃತಿ ಮತ್ತು ಬಿರುದು / ಪ್ರಶಸ್ತಿಗಳನ್ನು ಕುರಿತು ವಾಕ್ಯರೂಪದಲ್ಲಿ ಬರೆಯಿರಿ : 1 × 3 = 3**

25. ಎಂ. ಗೋಪಾಲಕೃಷ್ಣ ಅಡಿಗ

www.careerindia.com

CAREERINDIA



**V. ಕೆಳಗಿನ ಪದ್ಯದ ಸಾರಾಂಶವನ್ನು ವಾಕ್ಯರೂಪದಲ್ಲಿ ಬರೆಯಿರಿ : 1 × 3 = 3**

26. ತಟ್ಟೆಯೊಳು ಕರ್ಪೂರ ಮೌನದಲಿ ಕರಗುವೊಲು,

    ದೀಪದೆದುರಿಗೆ ತಿಮಿರ ಸರಿಯುವಂತೆ

    ಶಾಂತಿಯಲಿ ಬದುಕಿನೀ ಕರ್ತವ್ಯವನು ಮುಗಿಸು;

    ಕೂಗಾಡಿ, ಹಾರಾಡಿ ಫಲವದೇನು ?

**VI. ಕೆಳಗಿನ ವಾಕ್ಯದಲ್ಲಿರುವ ಅಲಂಕಾರವನ್ನು ಹೆಸರಿಸಿ, ಲಕ್ಷಣ ಬರೆದು, ಸಮನ್ವಯಗೊಳಿಸಿ : 1 × 3 = 3**

27. "ರಾಮಲಕ್ಷ್ಮಣರು ಅಶ್ವಿನಿದೇವತೆಗಳಂತೆ ಕಂಗೊಳಿಸುತ್ತಿದ್ದರು."

**VII. ಕೆಳಗೆ ಕೊಟ್ಟಿರುವ ಗಾದೆಮಾತುಗಳಲ್ಲಿ ಯಾವುದಾದರೂ ಒಂದನ್ನು ಆರಿಸಿಕೊಂಡು, ವಿಸ್ತರಿಸಿ ಬರೆಯಿರಿ : 1 × 3 = 3**

28. ತಾಳಿದವನು ಬಾಳಿಯಾನು.

**ಅಥವಾ**

ಕುಂಬಾರನಿಗೆ ವರುಷ; ದೊಣ್ಣೆಗೆ ನಿಮಿಷ

**VIII. ಕೆಳಗಿನ ವಾಕ್ಯ ಅಥವಾ ಹೇಳಿಕೆಗಳಿಗೆ ಸಂದರ್ಭ ಮತ್ತು ಸ್ವಾರಸ್ಯಗಳನ್ನು ಬರೆಯಿರಿ : 5 × 3 = 15**

29. "ಹಲವಾರು ವರ್ಷಗಳಿಂದ ಈ ಮರ ನನಗೆ ಆಶ್ರಯ ಕೊಟ್ಟಿದೆ."

30. "ಸಮಾಜದ ಹಣದಿಂದ ನನಗೆ ವಿದ್ಯೆ ಕೊಟ್ಟಿದ್ದಾರೆ."

31. "ಅಮ್ಮನ ಮಾತು ಸುಳ್ಳಾಗಲಾರದು."

32. "ಗೊತ್ತು ಗುರಿ ಇಲ್ಲದೆ ಕತ್ತಲಲ್ಲಿ ನಡೆದನು."

33. "ನಿಟ್ಟೋಟದಲಿ ಹಾಯ್ದನು ಬಿಟ್ಟ ಮಂಡೆಯಲಿ."

www.careerindia.com

CAREERINDIA



**IX. ಕೆಳಗಿನ ಪದ್ಯಭಾಗವನ್ನು ಪೂರ್ಣಗೊಳಿಸಿ ಬರೆಯಿರಿ : 1 × 4 = 4**

34. ಬೆಟ್ಟದ ಮೇಲೊಂದು ಮನೆಯ ಮಾಡಿ

..............................................................

..............................................................

..............................................................

..............................................................

ಬಂದಡೆ ಮನದಲ್ಲಿ ಕೋಪವ ತಾಳದೆ ಸಮಾಧಾನಿಯಾಗಿರಬೇಕು.

**ಅಥವಾ**

ಉಳ್ಳವರು ಶಿವಾಲಯವ ಮಾಡುವರು !

..............................................................

..............................................................

..............................................................

..............................................................

ಸ್ಥಾವರಕ್ಕಳಿವುಂಟು. ಜಂಗಮಕ್ಕಳಿವಿಲ್ಲ !

**X. ಕೆಳಗಿನ ಪ್ರಶ್ನೆಗೆ ಎಂಟು ಅಥವಾ ಹತ್ತು ವಾಕ್ಯಗಳಲ್ಲಿ ಉತ್ತರ ಬರೆಯಿರಿ : 1 × 4 = 4**

35. ಗಂಗೆಯಲ್ಲಿ ದೀಪಮಾಲೆಯ ಸುಂದರ ದೃಶ್ಯವನ್ನು ಲೇಖಕರು ವರ್ಣಿಸಿರುವ ರೀತಿಯನ್ನು ನೀವು ಮೆಚ್ಚುವ ಅಂಶಗಳೊಂದಿಗೆ ವಿವರಿಸಿ.

**ಅಥವಾ**

'ಗಂಗೆಯಲ್ಲಿ ದೀಪಮಾಲೆ' ಪಾಠದ ಸಾರಾಂಶವನ್ನು ನಿಮ್ಮ ಮಾತಿನಲ್ಲಿ ವಿವರಿಸಿ ಬರೆಯಿರಿ.

**XI. ಕೆಳಗಿನ ಗದ್ಯಭಾಗವನ್ನು ಮನಸ್ಸಿನಲ್ಲಿ ಓದಿಕೊಂಡು, ಕೊಟ್ಟಿರುವ ಪ್ರಶ್ನೆಗಳಿಗೆ ಉತ್ತರ ಬರೆಯಿರಿ : 1 × 4 = 4 ( 2 + 2 )**

36. ನಾನಿಲ್ಲಿ ಗುರುಸ್ಥಾನದಲ್ಲಿ ನಿಂತಿಲ್ಲ. ನೀವು ಶಿಷ್ಯ ಸ್ಥಾನದಲ್ಲಿ ಕುಳಿತಿಲ್ಲ. ನಾನು ಉಪದೇಶ ಮಾಡುತ್ತಿಲ್ಲ, ವಿಜ್ಞಾಪಿಸುತ್ತಿದ್ದೇನೆ. ನನ್ನಂತೆಯೇ ನಿಮ್ಮಲ್ಲಿ ಜಿಜ್ಞಾಸೆ ಮೂಡಿರಬಹುದು. ಜಿಜ್ಞಾಸೆ ಮಾಡದೆ ಇದ್ದವರಿಗೆ

www.careerindia.com

CAREERINDIA



ಜಿಜ್ಞಾಸೆ ಮಾಡಲು ಭಾವಾವಕಾಶಗಳು ದೊರೆಯುತ್ತವೆ. ಯುವಕರು ನಿರಂಕುಶಮತಿಗಳಾಗಬೇಕು. ನಿರಂಕುಶ ಮತಿ ಎಂಬುದು ನಿರಂಕುಶ ಪ್ರಭುತ್ವ ಎಂದು ತಿಳಿಯಬಾರದು. ನಿರಂಕುಶ ಪ್ರಭುತ್ವದ ಲಕ್ಷಣವೆಂದರೆ ವಿವೇಕಹೀನವಾದ ಸ್ವಚ್ಛಂದ ವರ್ತನೆ. ಸಂಯಮ ಪೂರ್ಣವಾದ ಬುದ್ಧಿ ಸ್ವಾತಂತ್ರ್ಯವೇ ನಿರಂಕುಶಮತಿ.

ಮತಿ ಮಾನವನ ಸರ್ವೋತ್ಕೃಷ್ಟವಾದ ಆಯುಧ. ಮತಿಯೇ ಕತ್ತಲಲ್ಲಿ ದಾರಿ ತೋರುವ ರತ್ನದ ಕೈದೀವಿಗೆ. ಮತಿಯ ದೆಸೆಯಿಂದಲೇ ಪ್ರಾಣಿ ಮಾತ್ರವಾಗುತ್ತಿದ್ದ ನರಜೀವಿ ಮನುಷ್ಯತ್ವಕ್ಕೆ ಏರಿದ್ದಾನೆ. ಮತಿಯ ಕೃಪಾಮಹಿಮೆಯಿಂದಲೇ ನಾವು ಮನುಷ್ಯತ್ವದಿಂದ ದೈವತ್ವಕ್ಕೆ ಏರಬೇಕಾಗಿದೆ. ಮತಿ ಮನುಷ್ಯತ್ವದ ಹಕ್ಕು. ಆದ್ದರಿಂದ ಸಹೋದರರೇ ಮತಿ ನಿಮ್ಮ ನೆಚ್ಚಿನ ರನ್ನ ದೀವಿಗೆಯಾಗಲಿ, ಸ್ವಲ್ಪವಾಗಿಯೋ ಹೆಚ್ಚಾಗಿಯೋ ಮತಿ ಮನುಷ್ಯರೆಲ್ಲರಲ್ಲಿಯೂ ಇರುತ್ತದೆ. ಆದರೆ ಈಗೇನಾಗಿದೆ ಅದರ ಗತಿ ? ಮೌಢ್ಯದಿಂದಲೂ, ಮತಾಚಾರಗಳಿಂದಲೂ ಸಮಾಜಭೀತಿಯಿಂದಲೂ, ರಾಜಭಯದಿಂದಲೂ ಸ್ವರ್ಗನರಕ ದೇವಾನುದೇವತೆಗಳ ಮೋಹ ಮಾಯೆಗಳಿಂದಲೂ ಅದು ಸತ್ವರಹಿತವಾಗಿದೆ ಕಾಂತಿಹೀನವಾಗಿದೆ.

***ಪ್ರಶ್ನೆಗಳು :***

ಅ) ಬದುಕಿನಲ್ಲಿ ಮತಿಯ ಮಹತ್ವವೇನು ?

ಆ) ನಿರಂಕುಶಮತಿ ಮತ್ತು ನಿರಂಕುಶ ಪ್ರಭುತ್ವ ನಡುವೆ ಇರುವ ವ್ಯತ್ಯಾಸವೇನು ?

[ Turn over

www.careerindia.com

CAREERINDIA



**XII. ಕೆಳಗಿನ ಯಾವುದಾದರೂ ಒಂದು ವಿಷಯವನ್ನು ಕುರಿತು ಪ್ರಬಂಧ ಬರೆಯಿರಿ : 1 × 4 = 4**

37. ತ್ಯಾಜ್ಯ ವಸ್ತುವಿನ ಸಮರ್ಪಕ ನಿರ್ವಹಣೆ.

**ಅಥವಾ**

ಆಧುನಿಕ ಶಿಕ್ಷಣದಲ್ಲಿ ತಂತ್ರಜ್ಞಾನದ ಸದ್ಬಳಕೆ.

**XIII. ಕೆಳಗಿನ ಯಾವುದಾದರೂ ಒಂದಕ್ಕೆ ಕೊಟ್ಟಿರುವ ಮಾಹಿತಿಯನ್ನು ಆಧರಿಸಿ ಪತ್ರ ಬರೆಯಿರಿ : 1 × 5 = 5**

38. ನಿಮ್ಮನ್ನು ಚಾಮರಾಜನಗರ ಜಿಲ್ಲೆಯ ಹನೂರು ತಾಲೂಕಿನ ಮಂಗಲ ಗ್ರಾಮದ ನಿವಾಸಿ 'ಬಸಪ್ಪ' ಎಂದು ಭಾವಿಸಿಕೊಂಡು, ಕಾಡಾನೆಗಳ ಹಾವಳಿ ತಪ್ಪಿಸುವಂತೆ ಕೋರಿ ಹನೂರು ವಲಯ ಅರಣ್ಯಾಧಿಕಾರಿಗಳಿಗೆ ಒಂದು ಮನವಿ ಪತ್ರವನ್ನು ಬರೆಯಿರಿ.

**ಅಥವಾ**

ನಿಮ್ಮನ್ನು ಬೆಂಗಳೂರಿನ ನ್ಯಾಷನಲ್ ಪ್ರೌಢಶಾಲೆಯ ವಿದ್ಯಾರ್ಥಿನಿ 'ಪ್ರಮೀಳಾ' ಎಂದು ಭಾವಿಸಿಕೊಂಡು, ನಿಮ್ಮ ಶಾಲೆಯ ವಿಶೇಷತೆಗಳನ್ನು ವಿವರಿಸಿ, ಮಂಡ್ಯದ ರಾಜೀವನಗರ ಬಡಾವಣೆಯ ನಿವಾಸಿಯಾದ 'ಅರುಣೇಶ್' ಎಂಬ ಹೆಸರಿನ ತಂದೆಯವರಿಗೊಂದು ಪತ್ರವನ್ನು ಬರೆಯಿರಿ.

www.careerindia.com